ಕೆಎಸ್ಎಟಿ/ಇಎಸ್‌ಟಿ(1)/ಆರ್‌ಸಿಟಿ-ಎಸ್‌ಟಿಎನ್/02/2023

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ
6 & 7ನೇ ಮಹಡಿ, ಕಂದಾಯ ಭವನ,
ಕೆ.ಜಿ.ರಸ್ತೆ, ಬೆಂಗಳೂರು – 560009.
ದಿನಾಂಕ: 14.03.2023

# ಸೂಚನಾ ಪತ್ರ

ವಿಷಯ: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿ ಸಂಬಂಧ ಅಭ್ಯರ್ಥಿಗಳು ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ

ಉಲ್ಲೇಖ: ಈ ಕಚೇರಿಯ ಎರಡು ಪ್ರತ್ಯೇಕ ಅಧಿಸೂಚನೆಗಳ ಸಂಖ್ಯೆ: ಕೆಎಸ್ಎಟಿ/ಇಎಸ್‌ಟಿ(1)/ ಆರ್‌ಸಿಟಿ-ಎಸ್‌ಟಿಎನ್/02/2023, ದಿನಾಂಕ : 06.01.2023

*****

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿ ಇರುವ ಉಳಿದ ಮೂಲವೃಂದದ 7 ಮತ್ತು ಸ್ಥಳೀಯ ವೃಂದದ 1 ಶೀಘ್ರಲಿಪಿಗಾರರ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತ ಅಧಿಸೂಚನೆಗಳ ಮೇರೆಗೆ ಈ ಕಚೇರಿಯ 6ನೇ ಮಹಡಿಯಲ್ಲಿ ಅರ್ಹ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಕಾರ್ಯವನ್ನು ದಿನಾಂಕ: 27.03.2023 ರಿಂದ ದಿನಾಂಕ: 29.03.2023 ರವರೆಗೆ ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಸೂಚನಾ ಪತ್ರದೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿರುವ ಅರ್ಹ ಅಭ್ಯರ್ಥಿಗಳು ಮೇಲ್ಕಂಡ ದಿನಾಂಕಗಳಂದು ನಡೆಯಲಿರುವ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ಸೂಚಿಸಿ ಈಗಾಗಲೇ ತ್ವರಿತ ಅಂಚೆ ಮೂಲಕ ಸೂಚನಾಪತ್ರಗಳನ್ನು ರವಾನಿಸಲಾಗಿದೆ. ಆದಾಗ್ಯೂ, ಇದರೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿ ಹೆಸರಿಸಿರುವ 323 ಉಳಿದ ಮೂಲ ವೃಂದದ ಅಭ್ಯರ್ಥಿಗಳು ಹಾಗೂ 11 ಸ್ಥಳೀಯ ವೃಂದದ ಅಭ್ಯರ್ಥಿಗಳು ಆಯಾ ದಿನಾಂಕಗಳಂದು ಅರ್ಜಿಯೊಂದಿಗೆ ಸಲ್ಲಿಸಿರುವ ಎಲ್ಲಾ ಮೂಲದಾಖಲೆಗಳೊಂದಿಗೆ ಪೂರ್ವಾಹ್ನ 10.30ಕ್ಕೆ ಹಾಜರಾಗುವಂತೆ ಈ ಮೂಲಕವೂ ಸಹ ತಿಳಿಯಪಡಿಸಿದೆ.

ಸಹಿ/-
ವಿಲೇಖನಾಧಿಕಾರಿ
ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ
ಬೆಂಗಳೂರು